ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 59/2020 ಸಿಡಬ್ಲೂ: 2 ಪಿ ಡಬ್ಲೂ: 1**

| | |
|---|---|
| ಹೆಸರು | ಮಂಜುನಾಥ್ ಕೆ. ಎಸ್. |
| ತಂದೆಯ ಹೆಸರು | ಶಂಕರ್ ಲಿಂಗೇಗೌಡ ಕೆ.ಟಿ. |
| ವಯಸ್ಸು | 45 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಕೂಡಲಕುಪ್ಪೆ ಗ್ರಾಮ |

ದಿನಾಂಕ: 17.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದ:

1. ಚಾಸಾ 1, 3, 10 ಮತ್ತು 11 ರವರ ಪರಿಚಯವಿದೆ. ಚಾಸಾ 4 ರಿಂದ 9 ಮತ್ತು 12 ಹಾಗೂ 13 ರವರ ಪರಿಚಯವಿಲ್ಲ. ಆರೋಪಿಯ ಪರಿಚಯವಿದೆ.

2. ದಿ: 09.06.2020 ರಂದು ಸುಮಾರು 12 ಗಂಟೆ ಸಮಯದಲ್ಲಿ ನಾನು ಕಿರಂಗೂರಿನ ಬಸ್ ಸ್ಟಾಪ್ ನ ಹತ್ತಿರ ನಿಂತಿದ್ದಾಗ ಸ್ಕೂಟರ್ ಅಲ್ಲಿ ಒಬ್ಬ ವ್ಯಕ್ತಿ ಹೂ ತೆಗೆದುಕೊಂಡು ಬಾಬುರಾಯನಕೊಪ್ಪಲು ಕಡೆಗೆ ಹೋಗುತ್ತಿದ್ದರು. ಆಗ ಆತನ ಹಿಂದೆ ಒಬ್ಬ ಲಾರಿ ಚಾಲಕ ಪಾಂಡವಪುರದ ಕಡೆಯಿಂದ ಬಂದು ಸ್ಕೂಟರ್ ನ ಹಿಂಭಾಗಕ್ಕೆ ಡಿಕ್ಕಿ ಮಾಡಿದ್ದು, ಸ್ಕೂಟರ್ ಓಡಿಸುತ್ತಿದ್ದ ವ್ಯಕ್ತಿ ಕೆಳಗೆ ಬಿದ್ದು, ಅವನ ಮೇಲೆ ಲಾರಿ ಹರಿದು ಹೋಗಿರುತ್ತದೆ. ಅಲ್ಲೇ ಬಿದ್ದಿದ್ದ ಆ ವ್ಯಕ್ತಿಯ ಫೋನ್ ನಿಂದ ನಾನು ಅವರ ಮನೆಗೆ ಫೋನ್ ಮಾಡಿ ವಿಷಯ ತಿಳಿಸಿರುತ್ತೇನೆ. ನಂತರ ನಾನು ಕೆಳಗೆ ಬಿದ್ದು ಪೆಟ್ಟಾದ ವ್ಯಕ್ತಿಯನ್ನು ಶ್ರೀರಂಗಪಟ್ಟಣದ ಸರ್ಕಾರಿ ಆಸ್ಪತ್ರೆಗೆ

ತೆಗೆದುಕೊಂಡು ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ ಸದರಿ ವ್ಯಕ್ತಿಯು ಮರಣ ಹೊಂದಿರುವುದಾಗಿ ತಿಳಿಸಿರುತ್ತಾರೆ. ನನಗೆ ಆ ವ್ಯಕ್ತಿಯ ಹೆಸರು ಗೊತ್ತಿಲ್ಲ. ಆತ ಮೈಸೂರಿನಲ್ಲಿ ಹೂವಿನ ವ್ಯಾಪಾರ ಮಾಡುತ್ತಿದ್ದ. ಅಪಘಾತ ಸ್ಥಳದಲ್ಲಿ ನಾನು ಲಾರಿಯ ಸಂಖ್ಯೆಯನ್ನು ನೋಡಿದ್ದ ಟಿಎನ್- 36-9112 ಆಗಿರುತ್ತದೆ. ಸ್ಕೂಟರ್ ನ ನಂಬರ್ ಕೆಎ-55-1626 ಆಗಿರುತ್ತದೆ. ಮೃತ ವ್ಯಕ್ತಿಯ ದೇಹವು ಚಿದ್ರಚಿದ್ರವಾಗಿತ್ತು. ಲಾರಿ ಚಾಲಕ ಲಾರಿಯನ್ನು ಅತಿವೇಗವಾಗಿ ಚಲಾಯಿಸಿಕೊಂಡು ಬಂದು ಡಿಕ್ಕಿಪಡಿಸಿರುತ್ತಾನೆ. ಅಪಘಾತವಾಗಲು ಲಾರಿ ಚಾಲಕನೇ ಜವಾಬ್ದಾರಿಯಾಗಿರುತ್ತಾನೆ. ನ್ಯಾಯಾಲಯದ ಮುಂದೆ ಹಾಜರಿರುವ ವ್ಯಕ್ತಿಯೇ ಅಪಘಾತಪಡಿಸಿರುತ್ತಾರೆ. ಆರೋಪಿಯ ಠಾಣೆಗೆ ಬಂದಿದ್ದು, ಆತನ ಹೆಸರು ಬಲರಾಮ್ ಎಂದು ತಿಳಿಸಿರುತ್ತಾರೆ. ನಾನು ಪೊಲೀಸರು ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ಪಂಚನಾಮೆಯನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಪಂಚನಾಮೆಯನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಗಿದೆ. ದಿಃ 09.06.2020 ರಂದು ನಾನು ಕೋರ್ಟಿ ಗೆ ಬರಬೇಕು ಎಂದು ಹೇಳಿ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿ ಎರಡು ಪೊಟೋಗಳನ್ನು ನೋಡಿ ತಮ್ಮ ಇರುವಿಕೆಯನ್ನು ಗುರುತಿಸಿದ್ದು, ಅದನ್ನು ನಿಪಿ 2 ಮತ್ತು 3 ಎಂದು ಗುರುತಿಸಲಾಗಿದೆ. (ಕಲಂ 65(ಬಿ) ಪ್ರಮಾಣ ಪತ್ರ ಇಲ್ಲದ ಕಾರಣ ಆರೋಪಿ ಪರ ವಕೀಲರ ಆಕ್ಷೇಪಣೆಗೆ ಒಳಪಟ್ಟು ಸದರಿ ಪೋಟೋಗಳನ್ನು ಗುರುತಿಸಲಾಗಿದೆ). ಸಾಕ್ಷಿ ನಾಲ್ಕು ಪೊಟೋಗಳನ್ನು ನೋಡಿ ಅದು ಮೃತ ವ್ಯಕ್ತಿಯ ದೇಹ ಎಂದು ಗುರುತಿಸಿದ್ದು, ಅವುಗಳನ್ನು ನಿಪಿ 4 ರಿಂದ 7 ಎಂದು ಗುರುತಿಸಲಾಗಿದೆ. ಸಾಕ್ಷಿ ಮತ್ತಷ್ಟು ಪೊಟೋಗಳನ್ನು ನೋಡಿ ಅದು ಅಪಘಾತಪಡಿಸಿದ ಲಾರಿ

ಮತ್ತು ಅಪಘಾತಕ್ಕೊಳಗಾದ ಸ್ಕೂಟರ್ ಎಂದು ಗುರುತಿಸಿದ್ದು, ಅವುಗಳನ್ನು ನಿಪಿ 8 ರಿಂದ 11 ಎಂದು ಗುರುತಿಸಲಾಗಿದೆ.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು, ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಎ ಪಿ ಪಿ ರವರಿಂದಃ

3. ನಾನು ಮೃತ ವ್ಯಕ್ತಿಯ ಫೋನ್ ನಿಂದ ಮೃತ ವ್ಯಕ್ತಿಯ ಮಗನಿಗೆ ಫೋನ್ ಮಾಡಿರುತ್ತೇನೆ ಎಂದರೆ ಸರಿ. ಆಸ್ಪತ್ರೆಗೆ ಚಾಸಾ 1, 3 ಮತ್ತು 10 ರವರು ಬಂದಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ದೂರನ್ನು ಚಾಸಾ 1 ಮೃತನ ಮಗ ನೀಡಿರುತ್ತಾರೆ ಎಂದರೆ ಸರಿ. ಅಪಘಾತ ಸ್ಥಳವನ್ನು ನಾನೇ ಪೊಲೀಸರಿಗೆ ತೋರಿಸಿರುತ್ತೇನೆ ಎಂದರೆ ಸರಿ. ದಿಃ 09.06.2020 ರಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ 5 ಮತ್ತು 6 ರವರ ಸಮಕ್ಷಮದಲ್ಲಿ ಪಂಚನಾಮೆಯನ್ನು ಮಾಡಿ ಕಚ್ಚಾ ನಕಾಶೆಯನ್ನು ತಯಾರಿಸಿ ನಮಗೆ ಓದಿ ಹೇಳಿ ನಮ್ಮ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿ. ಸದರಿ ಸಮಯದಲ್ಲಿ ಪೊಲೀಸರು ಲಾರಿ ಮತ್ತು ಸ್ಕೂಟರ್ ಅನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಲಾರಿಯು ಅಶೋಕ್ ಲೇಲ್ಯಾಂಡ್ ಕಂಪನಿಯದಾಗಿದ್ದು, ಅದು ಹಳದಿ, ಕಂದು ಮತ್ತು ಬಿಳಿಯ ಬಣ್ಣದ್ದಾಗಿತ್ತು ಎಂದರೆ ಸರಿಯಲ್ಲ. ಸ್ಕೂಟರ್ ಹೋಂಡಾ ಡಿಯೋ ಆಗಿದ್ದು, ಅದು ಕಪ್ಪು ಬಣ್ಣದ್ದಾಗಿತ್ತು ಎಂದರೆ ಸರಿ. ಸ್ಕೂಟರ್ ನ ಹಿಂಭಾಗದ ಲೈಟ್,ಸಿಗ್ನಲ್, ಹಿಂಭಾಗ ಬಾಡಿ ಪೈಪ್ ಜಖಂ

ಆಗಿತ್ತು ಎಂದರೆ ಸರಿ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 3 ರಿಂದ 3.45 ವರೆಗೂ ಮಾಡಿರುತ್ತಾರೆ ಎಂದರೆ ಸರಿ.

<u>**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಸ್ ಪಿ ವಕೀಲರಿಂದಃ**</u>

4. ನಾನು ವ್ಯವಸಾಯ ಮಾಡುತ್ತೇನೆ. ದಿಃ 09.06.2020 ರಂದು ಕೊವಿಡ್ ಸಾಂಕ್ರಾಮಿಕ ರೋಗ ಇದ್ದ ಕಾರಣ, ಜನರು ಓಡಾಡುವುದನ್ನು ನಿಷೇಧ ಮಾಡಿರುತ್ತಾರೆ ಎಂದರೆ ಸರಿ. ನಾನು ಬಾಬುರಾಯನ ಕೊಪ್ಪಲಿನ ಹತ್ತಿರ ಹೂವಿನ ವ್ಯಾನ್ ಪ್ರತಿದಿನ ಬರುತ್ತಿದ್ದು, ಸದರಿ ವ್ಯಾನ್ ಗೆ ಹೂ ಹಾಕಿ ನಂತರ ಕಿರಂಗೂರ್ ಬಸ್ ಸ್ಟಾಂಡ್ ನ ಹತ್ತಿರ ನಿಂತಿದ್ದೆ. ನಾನು ಪೊಲೀಸರಿಗೆ ಬಾಬುರಾಯನ ಕೊಪ್ಪಲಿನ ಹತ್ತಿರ ಹೂವಿನ ವ್ಯಾನ್ ಪ್ರತಿದಿನ ಬರುತ್ತಿದ್ದು, ಸದರಿ ವ್ಯಾನ್ ಗೆ ಹೂ ಹಾಕಿ ನಂತರ ಕಿರಂಗೂರ್ ಬಸ್ ಸ್ಟಾಂಡ್ ನ ಹತ್ತಿರ ನಿಂತಿದ್ದೆ ಎಂದು ಹೇಳಿರುವುದಿಲ್ಲ. ಘಟನಾ ಸ್ಥಳದಲ್ಲಿ ಜನರಿದ್ದು, ಅವರು ಬೇರೆ ಬೇರೆ ಊರಿನವರಾಗಿರುತ್ತಾರೆ. ನನಗೆ ಮೃತ ಹಾಗೂ ಆತನ ಮಗನ ಪರಿಚಯವಿಲ್ಲ. ಕಿರಂಗೂರ್ - ಮೈಸೂರು ರಸ್ತೆಯ ಬಾಬುರಾಯನ ಕೊಪ್ಪಲಿನ ಹತ್ತಿರ ಬೈಕ್ ಚಾಲಕ ತಿರುವಿನ ಹತ್ತಿರ ಬೈಕ್ ಅನ್ನು ತಿರುಗಿಸಿ ಮುಂದೆ ಬಾಬುರಾಯನ ಕೊಪ್ಪಲಿನ ಒಳಗೆ ಹೋಗುವ ರಸ್ತೆಯ ಕಡೆಗೆ ಹೋಗಿರುತ್ತಾರೆ. ನಾನು ನಿಂತ ಸ್ಥಳದಿಂದ ಅಪಘಾತವಾದ ಸ್ಥಳವು ಸುಮಾರು 100 ಮೀಟರ್ ಅಂತರದಲ್ಲಿತ್ತು. ಬಸ್ ಸ್ಟಾಂಡ್ ಹತ್ತಿರ ನಿಂತ ಕಾರಣ ಎರಡೂ ರಸ್ತೆಯಲ್ಲಿ ವಾಹನಗಳು ಓಡಾಡುವುದು ಕಾಣುವುದಿಲ್ಲ ಎಂದರೆ ಸರಿಯಲ್ಲ. ಲಾರಿ ಪಾಂಡವಪುರದಿಂದ ಬಂದು ಮೈಸೂರು ಕಡೆಗೆ ತಿರುಗಿಕೊಂಡ ಕಾರಣ ಬಾಬುರಾಯನ ಕೊಪ್ಪಲಿನ ಕಡೆಗೆ ಹೋಗುವ ಬೈಕ್ ಸವಾರನನ್ನು ಡಿಕ್ಕಿ ಪಡಿಸಲು

ಸಾಧ್ಯವಿಲ್ಲ ಎಂರದೆ ಸಾಕ್ಷಿ ಲಾರಿ ಚಾಲಕ ಅತಿವೇಗವಾ ಬಂದು ಡಿಕ್ಕಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಕಿರಂಗೂರ್ ಮೈಸೂರು ರಸ್ತೆಯಲ್ಲಿ ಹಂಪ್ಸ್ ಇದೆ ಎಂದರೆ ಸರಿ. ಯಾವುದೇ ವಾಹನ ಅಲ್ಲಿ ನಿಧಾನವಾಗಿ ಚಲಿಸಬೇಕು ಎಂದರೆ ಸರಿ. ನಾನು ಪೊಲೀಸರಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ನಾನು ಘಟನಾ ಸ್ಥಳದಲ್ಲಿ ಇಲ್ಲದೇ ಇರುವ ಕಾರಣಕ್ಕೆ ನಾನು ಪೊಲೀಸರಿಗೆ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರು ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿ ನಾನು ಸ್ಥಳದಲ್ಲಿ ಸಹಿಗಳನ್ನು ಮಾಡಿದ್ದೇನೆ ಎಂದು ನುಡಿಯುತ್ತಾರೆ. ನಿಪಿ 1 ರಲ್ಲಿ ನನ್ನೊಂದಿಗೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಅಷ್ಟು ನೆನಪಿಲ್ಲ. ನಾನು ನಿಪಿ 1 ಅನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುವುದಿಲ್ಲ, ನಿಪಿ 2 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅಪಘಾತವಾದ ಸ್ಥಳ ಅಕ್ಕಪಕ್ಕ ಇರುವ ಸೋಮ ಶೇಖರ್ ಮತ್ತು ಚಂದ್ರೇಗೌಡ ಅವರ ಹೇಳಿಕೆಯನ್ನು ಪಡೆದಿರಬಹುದು, ನನ್ನ ಸಮಕ್ಷಮ ಪಡೆದಿರುವುದಿಲ್ಲ. ನಾನು ಮೃತನ ಫೋನ್ ನಿಂದ ಅಪಘಾತವಾದ ವಿಷಯ ತಿಳಿಸಿದ್ದು, ನನಗೆ ಫೋನ್ ನಂಬರ್ ನೆನಪಿಲ್ಲ. ಲಾರಿಯ ಮುಂಭಾಗದಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯು ಆ ದಿನ ಯಾವ ಬಟ್ಟೆ ಧರಿಸಿದ್ದ ಎಂದು ನನಗೆ ಗೊತ್ತಿಲ್ಲ. ಅಪಘಾತಪಡಿಸಿ ಲಾರಿ ಚಾಲಕ ಪೊಲೀಸ್ ಠಾಣೆಗೆ ನೇರವಾಗಿ ಹೋಗಿರುತ್ತಾರೆ. ನಾನು ಯಾವುದೇ ದೂರನ್ನು ನೀಡಿರುವುದಿಲ್ಲ, ನಾನು ಪೊಲೀಸ್ ಠಾಣೆಗೆ ಸುಮಾರು 1 ರಿಂದ 1 ವರೆ ಸಮಯದಲ್ಲಿ ಹೋಗಿರುತ್ತೇನೆ. ನಾನು ಆರೋಪಿಯ ಬಣ್ಣ, ಮುಖ ಚಹರೆ ಹಾಗೂ ಎತ್ತರದ ಬಗ್ಗೆ ಪೊಲೀಸರಿಗೆ ತಿಳಿಸಿರುವುದಿಲ್ಲ. ಅಪಘಾತ ಸ್ಥಳದಲ್ಲಿ ಮೃತ ವ್ಯಕ್ತಿ ತೆಗೆದುಕೊಂಡು

ಹೋಗಿತ್ತಿದ್ದ ಹೂವುಗಳನ್ನು ಹಾಗೂ ಅದನ್ನು ತುಂಬಿರುವ ಬಟ್ಟೆಯನ್ನು ಪೊಲೀಸರು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಅಪಘಾತದ ಸ್ಥಳದಲ್ಲಿ ಲಾರಿ ಮತ್ತು ಸ್ಕೂಟರ್ ಇದ್ದು, ಅದರ ಪೊಟೋಗಳನ್ನು ಪೊಲೀಸರು ತೆಗೆದಿರುತ್ತಾರೆ. ನಿಪಿ 8 ರಿಂದ 11 ಪೊಟೋಗಳನ್ನು ಠಾಣಾ ಆವರಣದಲ್ಲಿ ತೆಗೆಯಲಾಗಿದೆ ಎಂದರೆ ಸರಿ. ಮೃತ ಹಾಗೂ ಆತನ ಮಗ ಹೂವಿನ ವ್ಯಾಪಾರ ಮಾಡುವ ಕಾರಣ ನನಗೆ ಪರಿಚಯವಿದ್ದು, ನಾನು ಆತನ ಕುಟುಂಬಕ್ಕೆ ಪರಿಹಾರ ಬರಲಿ ಎಂಬ ದುರುದ್ದೇಶದಿಂದ ಯಾವುದೇ ಅಪಘಾತವನ್ನು ನೋಡದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತರು ಹೆಲ್ಮೆಟ್ ಧರಿಸಿದ್ದಾ ಅಥವಾ ಇಲ್ಲ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತವು ಲಾರಿ ಚಾಲಕನ ತಪ್ಪಿ ನಿಂದ ಆಗದೇ ಇದ್ದರೂ ಮೃತನ ಕುಟುಂಬಕ್ಕೆ ಪರಿಹಾರ ಬರಲಿ ಎಂಬ ದುರುದ್ದೇಶದಿಂದ ಯಾವುದೇ ಅಪಘಾತವನ್ನು ನೋಡದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*